# ಚುನಾವಣೆಗೆ ಹೊಸ ನಿಯಮ

## ವಯೋವೃದ್ಧರಿಗೆ, ಸೋಂಕಿತರಿಗೆ ಅಂಚೆ ಮತ ಆನ್‌ಲೈನಲ್ಲೂ ನಾಮಪತ್ರ ಸಲ್ಲಿಕೆಗೆ ಅವಕಾಶ

ನವದೆಹಲಿ: ದೇಶಾದ್ಯಂತ ಕೊರೋನಾ ಸೋಂಕು ವ್ಯಾಪಕವಾಗಿರುವ ಹಿನ್ನೆಲೆಯಲ್ಲಿ, ಮುಂಬರುವ (ಕೋವಿಡ್ ಸಾಂಕ್ರಾಮಿಕ ಅವಧಿಯಲ್ಲಿ) ಚುನಾವಣೆಗಳನ್ನು ಆಯೋಜಿಸುವ ಸಂಬಂಧ ಕೇಂದ್ರ ಚುನಾವಣಾ ಆಯೋಗ ಹೊಸ ನಿಯಮಗಳನ್ನು ರೂಪಿಸಿದೆ.



ಶುಕ್ರವಾರ ಬಿಡುಗಡೆ ಮಾಡಲಾದ ಈ ನಿಯಮಗಳ ಅನ್ವಯ, 80 ವರ್ಷ ದಾಟಿದ ವರಿಗೆ ಹಾಗೂ ಕೊರೋನಾ ರೋಗಿಗಳಿಗೆ ಅಂಚೆಯಲ್ಲಿ ಮತದಾನ ಮಾಡಲು ವ್ಯವಸ್ಥೆ ಕಲ್ಪಿಸಿದೆ. ಜೊತೆಗೆ, ಮತಗಟ್ಟೆಗಳಲ್ಲಿ ಮತದಾನ ಮಾಡುವ ಎಲ್ಲ ಮತದಾರರಿಗೂ ರಿಜಿಸ್ಟರ್‌ಗೆ ಸಹಿ ಹಾಕಲು ಮತ್ತು ಎಲೆಕ್ಟ್ರಾನಿಕ್ ಮತಯಂತ್ರದ ಗುಂಡಿ ಒತ್ತಲು ಕಡ್ಡಾಯವಾಗಿ ಹ್ಯಾಂಡ್‌ಗ್ಲೌಸ್ ನೀಡಲು ನಿರ್ಧರಿಸಿದೆ.

ಜೊತೆಗೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಆನ್‌ಲೈನ್‌ನಲ್ಲೇ ನಾಮಪತ್ರ ಸಲ್ಲಿಕೆ ಮಾಡಬಹುದು. ಆದರೆ, ಅದಕ್ಕೂ ಮುನ್ನ ದಾಖಲೆಗಳಿಗೆ ರಿಟರ್ನಿಂಗ್ ಅಧಿಕಾರಿಯ ಮುಂದೆ ಸಹಿ ಹಾಕಿ, ಪ್ರಿಂಟೌಟ್ ತೆಗೆದುಕೊಳ್ಳಬೇಕು. ಜೊತೆಗೆ, ಚುನಾವಣೆಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವವರು ಮಾಸ್ಕ್ ಧರಿಸುವುದು ಕಡ್ಡಾಯವಾಗಿದೆ.

5

### ಪ್ರಮುಖ ನಿಯಮ

1. 80 ವರ್ಷ ದಾಟಿದವರು, ಕೊರೋನಾ ರೋಗಿಗಳಿಗೆ ಅಂಚೆ ಮತದಾನ ಸೌಲಭ್ಯ
2. ಆನ್‌ಲೈನಲ್ಲಿ ನಾಮಪತ್ರ ಸಲ್ಲಿಕೆಗೆ ಅವಕಾಶ. ನೇರ ಸಲ್ಲಿಕೆ ವೇಳೆ ಮೂವರು ಮಾತ್ರ
3. ಚುನಾವಣಾ ಪ್ರಚಾರಕ್ಕೆ ಒಮ್ಮೆಗೆ ಐದಕ್ಕಿಂತ ಹೆಚ್ಚು ಜನರು ಹೋಗುವಂತಿಲ್ಲ
4. ಮತ ಚಲಾಯಿಸಲು ಬರುವ ಎಲ್ಲ ಮತದಾರರಿಗೂ ಉಚಿತವಾಗಿ ಹ್ಯಾಂಡ್‌ಗ್ಲೌಸ್
5. ಚುನಾವಣೆ ವೇಳೆ ಸಾಮಾಜಿಕ ಅಂತರ, ಪಿಪಿಇ ಕಿಟ್ ಬಳಕೆ, ಫೇಸ್‌ಶೀಲ್ಡ್ ಕಡ್ಡಾಯ
6. ಮತಗಟ್ಟೆಗಳಲ್ಲಿ ಥರ್ಮಲ್ ಸ್ಕ್ಯಾನರ್, ಮಾಸ್ಕ್, ಸ್ಯಾನಿಟೈಸರ್, ಗ್ಲೌಸ್ ಕಡ್ಡಾಯ
7. ಮುಂಬರುವ ಸಾರ್ವತ್ರಿಕ ಚುನಾವಣೆ, ಉಪಚುನಾವಣೆಗಳಿಗೆ ನಿಯಮ ಅನ್ವಯ

# ಚುನಾವಣೆಗೆ ಹೊಸ ನಿಯಮ

ಮೊದಲ ಪುಟದಿಂದ

ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳಿಂದ ಸಲಹೆ ಪಡೆದು ಆಯೋಗ ಈ ನಿಯಮಗಳನ್ನು ಪ್ರಕಟಿಸಿದೆ.

ಇಷ್ಟು ದಿನ ಚುನಾವಣಾ ಕರ್ತವ್ಯದಲ್ಲಿ ಪಾಲ್ಗೊಳ್ಳುವವರು ಹಾಗೂ ಸೈನಿಕರು ಮುಂತಾದ ಅಗತ್ಯ ಸೇವೆಗಳಲ್ಲಿ ಇರುವವರಿಗಷ್ಟೇ ಅಂಚೆಯಲ್ಲಿ ಮತದಾನ ಮಾಡಲು ಅವಕಾಶವಿತ್ತು. ಅದನ್ನು ಈಗ 80 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಎಲ್ಲ ವೃದ್ಧರು, ಅಂಗವಿಕಲರು, ಕೊರೋನಾ ಸೋಂಕಿತರು ಅಥವಾ ಸಂಭವನೀಯ ಸೋಂಕಿತರಿಗೂ ವಿಸ್ತರಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಬಿಹಾರದಲ್ಲಿ ಚುನಾವಣೆ ನಡೆಯಬೇಕಿದೆ. ಕೋವಿಡ್ ನಿಯಮಾವಳಿ ಪ್ರಕಾರ ದೇಶದಲ್ಲಿ ನಡೆಯುವ ಮೊದಲ ಸಾರ್ವತ್ರಿಕ ವಿಧಾನಸಭೆ ಚುನಾವಣೆ ಬಿಹಾರದ್ದೇ ಆಗಿರಲಿದೆ.

ಹೊಸ ನಿಯಮಾವಳಿಯಲ್ಲಿ ಖುದ್ದಾಗಿ ಚುನಾವಣಾಧಿಕಾರಿಯ ಬಳಿಗೆ ತೆರಳಿ ನಾಮಪತ್ರ ಸಲ್ಲಿಸುವುದಕ್ಕೂ ಅವಕಾಶವಿರಲಿದೆ. ಭದ್ರತಾ ಠೇವಣಿಯನ್ನು ಆನ್‌ಲೈನ್‌ನಲ್ಲಿ ಪಾವತಿಸಲು ಇದೇ ಮೊದಲ ಬಾರಿ ಅವಕಾಶ ನೀಡಲಾಗಿದೆ. ಮನೆಮನೆ ಪ್ರಚಾರಕ್ಕೆ 5ಕ್ಕಿಂತ ಹೆಚ್ಚು ಜನ ತೆರಳುವಂತಿಲ್ಲ ಎಂದು ಆಯೋಗ ಹೇಳಿದೆ.